




## ಟ್ಯೂನ್‌ಇನ್

ಆ್ಯಂಡ್ರಾಯ್ಡ್‌ನ ಈ ಆ್ಯಪ್‌ನಿಂದ ವಿವಿಧ ದೇಶಗಳ ರೇಡಿಯೋದಿಂದ ಸಂಗೀತ, ಸುದ್ದಿ, ಕ್ರೀಡೆ, ಮನರಂಜನೆ, ಹಾಸ್ಯವನ್ನು ಕೇಳಬಹುದು. ಸುಮಾರು ಒಂದು ಲಕ್ಷ ರೇಡಿಯೊ ಸ್ಟೇಶನ್‌ಗಳು, 20 ಲಕ್ಷ ಪಾಡ್‌ಕಾಸ್ಟ್‌ಗಳು, ಸಂಗೀತ ಕಾರ್ಯಕ್ರಮಗಳನ್ನು ಉಚಿತವಾಗಿ ನಿಮ್ಮ ಆ್ಯಂಡ್ರಾಯ್ಡ್ ಹಾಗೂ ಟ್ಯಾಬ್ಲೆಟ್‌ನಲ್ಲಿ ಕೇಳಬಹುದು. ಕಾಲೇಜು ಫುಟ್ಬಾಲ್ ಪಂದ್ಯಗಳ ವೀಕ್ಷಕ ವಿವರಣೆಯನ್ನೂ ಕೇಳಬಹುದು. ಇದು ಟ್ಯೂನ್‌ಇನ್.ಕಾಂ ಸಂಪರ್ಕ ಹೊಂದಿದ್ದು ಆ್ಯಪ್ ಪಡೆದವರು ಲಾಗ್‌ಇನ್ ಆಗಬಹುದು.




## ಬಿಬಿಸಿ ನ್ಯೂಸ್

ಎರಡು ಸಾವಿರಕ್ಕೂ ಅಧಿಕ ಪತ್ರಕರ್ತರನ್ನು ಹೊಂದಿರುವ ಬಿಬಿಸಿ ಗ್ಲೋಬಲ್ ನೆಟ್‌ವರ್ಕ್‌ನಿಂದ ಜಾಗತಿಕ ಹಾಗೂ ಪ್ರಾದೇಶಿಕ ತಾಜಾ ಸುದ್ದಿಯನ್ನು ಕೇಳಬಹುದು. ಬ್ರೇಕಿಂಗ್ ಸುದ್ದಿ, ಮನರಂಜನೆ, ಕ್ರೀಡೆ, ವಾಣಿಜ್ಯ, ತಂತ್ರಜ್ಞಾನ, ಕಲೆ ಮೊದಲಾದವುಗಳ ಬಗ್ಗೆ ತಾಜಾ ಸುದ್ದಿ ಈ ಆ್ಯಪ್‌ನಿಂದ ನಿಮಗೆ ಲಭ್ಯ. ವಿಡಿಯೋವನ್ನು ಕೂಡಾ ನೀವು ಎಲ್ಲೇ ಇದ್ದರೂ ವೀಕ್ಷಿಸಬಹುದು. ಶೀರ್ಷಿಕೆಗಳನ್ನಷ್ಟೇ ವೀಕ್ಷಿಸಬಹುದು. ವಿಶೇಷ ವರದಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಆಫ್‌ಲೈನ್ ಆಗಿ ಓದಬಹುದು. ಈ ವರದಿಗಳನ್ನು ಸಾಮಾಜಿಕ ಜಾಲತಾಣ, ಇಮೇಲ್, ಎಸ್‌ಎಂಎಸ್ ಮೂಲಕ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು.

## ಬ್ಯೂಟಿಲಿಶ್

ಈ ಆ್ಯಪ್‌ನಿಂದ ಹೊಸ ಸೌಂದರ್ಯ ವರ್ಧಕಗಳು, ಮೇಕಪ್ ಟಿಪ್ಸ್ ವಿವರ ಸಿಗುವುದಲ್ಲದೇ ಹೊಸ ಉತ್ಪನ್ನಗಳನ್ನು ಖರೀದಿಸಬಹುದು. ಆ್ಯಂಡ್ರಾಯ್ಡ್‌ನ ಈ ಆ್ಯಪ್‌ನಲ್ಲಿ ಮೇಕಪ್ ಮತ್ತು ಸೌಂದರ್ಯ ಸಾಧನಗಳ ವಿಮರ್ಶೆ ಕೂಡಾ ಲಭ್ಯ. ಉತ್ಪನ್ನಗಳನ್ನು ಖರೀದಿಸಿ ಬಳಸಿದವರ ಅಭಿಪ್ರಾಯಗಳೂ ಇರುತ್ತವೆ. ತಲೆಗೂದಲ ವಿನ್ಯಾಸ, ಮೇಕಪ್ ಮಾಡಿದ ಚಿತ್ರಗಳು, ಉಗುರಿನ ಕಲೆಯ ಚಿತ್ರಗಳು ಇರುತ್ತವೆ. ಅವುಗಳನ್ನು ನೋಡಿ ನಿಮ್ಮ ತಲೆಗೂದಲ ವಿನ್ಯಾಸ ಮಾಡಿಕೊಳ್ಳಬಹುದು. ಪ್ರತಿಯೊಂದು ಹಂತದ ವಿಡಿಯೋ ಲಭ್ಯ. ಸೌಂದರ್ಯದ ವಿಷಯದಲ್ಲಿ ಅನುಮಾನವಿದ್ದರೆ ಪ್ರಶ್ನೆಗಳನ್ನು ಕೇಳಿ ಪರಿಹರಿಸಿಕೊಳ್ಳಬಹುದು.




## ಹೋಟೆಲ್ ಟುನೈಟ್

ಕೊನೆಯ ಕ್ಷಣದಲ್ಲಿ ವಿದೇಶಗಳಲ್ಲಿ ಹೋಟೆಲ್ ಕೊಠಡಿ ಬುಕ್ ಮಾಡಿಸಲು ಈ ಆ್ಯಪ್ ನೆರವಿಗೆ ಬರುತ್ತದೆ. ಅದೂ ಕಡಿಮೆ ದರದಲ್ಲಿ. ಅಮೆರಿಕ, ಇಂಗ್ಲೆಂಡ್, ಇಟಲಿ, ಜರ್ಮನಿ ಮೊದಲಾದ 12 ದೇಶಗಳ 150 ಸ್ಥಳಗಳಲ್ಲಿ ಕೊಠಡಿ ಬುಕ್ ಮಾಡಬಹುದು. ನಿಮಗೆ ಯಾವತ್ತು ಅಗತ್ಯವೋ ಅಂದೇ ಬುಕ್ ಮಾಡಬಹುದು. ದರದಲ್ಲಿ ಚೌಕಾಶಿ ಮಾಡುವ ಸವಲತ್ತಿದೆ. ಈ ಪಟ್ಟಿಗೆ ಇನ್ನಷ್ಟು ಸ್ಥಳಗಳನ್ನು ಸೇರಿಸಲಾಗುವುದು.




■ ಎಸ್. ತುಂಬೆ